**<u>ಕರ್ನಾಟಕ ಸರ್ಕಾರದ ನಡವಳಿಗಳು</u>**

ವಿಷಯ:–2022–23 ನೇ ಸಾಲಿನಲ್ಲಿ ಕೆನರಾ ಬ್ಯಾಂಕ್ ನಿಂದ ಬೆಂಗಳೂರು ಸುತ್ತಮುತ್ತಲಿನ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಪಡೆದಿರುವ ಅವಧಿ ಸಾಲಕ್ಕೆ ಬಡ್ಡಿಯನ್ನು ಪಾವತಿಸಲು ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:–1.ಸರ್ಕಾರದ ಆದೇಶ ಸಂಖ್ಯೆ. ಲೋಇ/ಇ–71/ಇಎಪಿ/2017, ದಿ: 18–09–2017.
2.ಸರ್ಕಾರದ ಪತ್ರ ಸಂಖ್ಯೆ. ಲೋಇ/65/ಇಎಪಿ/2018 (ಪಿ–2), ದಿನಾಂಕ: 08–03–2019.
3.ಸರ್ಕಾರದ ಆದೇಶ ಸಂಖ್ಯೆ. ಲೋಇ/ಇ–69/ಇಎಪಿ/2020, ದಿನಾಂಕ: 26–02–2021.
4.ಸರ್ಕಾರದ ಪತ್ರ ಸಂಖ್ಯೆ.ಲೋಇ/80/ಇಎಪಿ/2021, ದಿನಾಂಕ: 12–03–2021.
5.ಸರ್ಕಾರದ ಆದೇಶ ಸಂಖ್ಯೆ. ಲೋಇ ಇ–231 ಇಎಪಿ 2021, ದಿನಾಂಕ: 18–03–2022.
5.ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ರವರ ಪತ್ರ ಸಂಖ್ಯೆ. ಕ.ರ.ಅ.ನಿನಿ/ಲೆ.ಶಾ/05/ಲೆ.ಪ/ಅವಧಿ ಸಾಲ/2023–24/466, ದಿನಾಂಕ: 02–06–2023.

PRAMC
EIC 15/7
SE-1
SE-2
DS
EE 15/07/23
AEE-1
AEE-2
AEE-3

****

ಪ್ರಸ್ತಾವನೆ:–

AE-3

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ಇಪಿಸಿ ಮಾದರಿಯಲ್ಲಿ ಬೆಂಗಳೂರು ಸುತ್ತಮುತ್ತಲಿನ 155 ಕಿಮೀ ಉದ್ದದ ರಸ್ತೆಗಳನ್ನು ರೂ.2095 ಕೋಟಿಗಳ ಮೊತ್ತದಲ್ಲಿ ಅಭಿವೃದ್ಧಿಪಡಿಸಲು ಓದಲಾದ (1)ರ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.

ಮುಂದುವರೆದು, ಕಾರ್ಯಯೋಜನೆಗೆ ಭರಿಸಬೇಕಾದ ಯೋಜನಾ ಮೊತ್ತದ ಶೇ.50% ರಷ್ಟು ಸರ್ಕಾರದ ಅನುದಾನದಿಂದ ಹಾಗೂ ಶೇ.50 ರಷ್ಟನ್ನು ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯಲು ಸಹಮತಿಸಿದೆ. ಮೇಲಿನಂತೆ ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲದ ಮೊತ್ತದಲ್ಲಿ ಶೇ.50 ರಷ್ಟು ಸಾಲ ಮತ್ತು ಬಡ್ಡಿಯನ್ನು ಸರ್ಕಾರದ ಅನುದಾನದಿಂದ ಹಾಗೂ ಶೇ.50 ರಷ್ಟನ್ನು ಕೆಆರ್‌ಡಿಸಿಎಲ್ ಸಂಸ್ಥೆಯು ಟೋಲ್ ಸಂಗ್ರಹಣೆಯಿಂದ ಬರುವ ಸಂಪನ್ಮೂಲದಿಂದ ಮರುಪಾವತಿಸಲು ಸಹಮತಿಯನ್ನು ಓದಲಾದ (2)ರ ಪತ್ರದಲ್ಲಿ ನೀಡಲಾಗಿರುತ್ತದೆ.

435
15/7/23

2020–21 ಸಾಲಿನ ಆರ್ಥಿಕ ವರ್ಷದಲ್ಲಿ ರೂ.350.00 ಕೋಟಿಗಳನ್ನು ಅವಧಿ ಸಾಲಗಳ ಮೂಲಕ ಬ್ಯಾಂಕ್‌ಗಳಿಂದ ಸಂಗ್ರಹಿಸುವ ಪ್ರಸ್ತಾವನೆಗೆ ದಿನಾಂಕ 29–08–2020 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ನಡೆದ off Budget Borrowings Monitoring Committee (OBBMC) ಸಭೆಯಲ್ಲಿ ಅನುಮೋದನೆಯನ್ನು ನೀಡಲಾಗಿರುತ್ತದೆ. ಅದರಂತೆ ಕೆನರಾ ಬ್ಯಾಂಕ್, ಇಂಡಸ್ಟ್ರಿಯಲ್ ಫೈನಾನ್ಸ್ ಬ್ರಾಂಚ್ ಬೆಂಗಳೂರು ಇವರು ಅವಧಿ ಸಾಲಕ್ಕೆ ಸರ್ಕಾರಿ ಖಾತರಿಯನ್ನು ಪಡೆದು ಸಲ್ಲಿಸುವ ನಿಬಂಧನೆಯಂತೆ ದಿನಾಂಕ 17–11–2020 ರ ಪತ್ರದಲ್ಲಿ ರೂ.350.00 ಕೋಟಿಗಳ ಅವಧಿ ಸಾಲವನ್ನು ಮಂಜೂರು ಮಾಡಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.

. . . . . 2

2020-21ನೇ ಸಾಲಿಗೆ Internal & External Budgetary Resources (IEBR) ಅಡಿಯಲ್ಲಿ ಕೆಆರ್‌ಡಿಸಿಎಲ್‌ಗೆ ಅವಧಿ ಸಾಲಗಳ (Term Loan) ಮೂಲಕ ರೂ.350.00 ಕೋಟಿಗಳ ಹಣ ಸಂಗ್ರಹಿಸಲು ಅನುಮೋದನೆ ಹಾಗೂ ಸರ್ಕಾರಿ ಖಾತರಿಗೆ ಕೆಲವು ಷರತ್ತು ಹಾಗೂ ನಿಬಂಧನೆಗೆ ಒಳಪಟ್ಟು ಓದಲಾದ (3)ರ ಪತ್ರದಲ್ಲಿ ಅನುಮೋದನೆಯನ್ನು ನೀಡಲಾಗಿರುತ್ತದೆ.

2021-22 ನೇ ಸಾಲಿಗೆ Internal & External Budgetary Resources (IEBR) ಅಡಿಯಲ್ಲಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತಕ್ಕೆ ಅವಧಿ ಸಾಲಗಳ (Term Loan) ಮೂಲಕ ರೂ.350.00 ಕೋಟಿಗಳ ಹಣ ಸಂಗ್ರಹಿಸಲು ಅನುಮೋದನೆ ಹಾಗೂ ಸರ್ಕಾರಿ ಖಾತರಿಗೆ ಕೆಲವು ಷರತ್ತು ಹಾಗೂ ನಿಬಂಧನೆಗೆ ಒಳಪಟ್ಟು ಓದಲಾದ (5)ರ ಪತ್ರದಲ್ಲಿ ಅನುಮೋದನೆಯನ್ನು ನೀಡಲಾಗಿದೆ.

2022-23ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ: 3054-80-190-0-01-ಋಣಸೇವೆಗಳು-240-ಬಡ್ಡಿ ಸಾಲ ಮೇಲುಸ್ತುವಾರಿ ಅಡಿಯಲ್ಲಿ ರೂ.5481.77 ಲಕ್ಷಗಳನ್ನು ಹಂಚಿಕೆ ಮಾಡಲಾಗಿದ್ದು, ಇದರಲ್ಲಿ ಈಗಾಗಲೇ ಇಲ್ಲಿಯವರೆವಿಗೂ ರೂ.86.70 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ರೂ.5395.07 ಲಕ್ಷಗಳು ಬಾಕಿ ಉಳಿದಿರುತ್ತದೆ.

ಮೇಲ್ಕಂಡಂತೆ ಮಂಜೂರಾಗಿರುವ 2020-21 ನೇ ಸಾಲಿನಲ್ಲಿ ರೂ.350.00 ಕೋಟಿಗಳನ್ನು ಹಾಗೂ 2021-22 ನೇ ಸಾಲಿನಲ್ಲಿ ರೂ.350.00 ಕೋಟಿಗಳು ಸೇರಿ ಒಟ್ಟಾರೆ ರೂ.700.00 ಕೋಟಿಗಳ ಅವಧಿ ಸಾಲದ ಮೊತ್ತವನ್ನು ಕೆನರಾ ಬ್ಯಾಂಕಿನಿಂದ ಪಡೆದು ಬೆಂಗಳೂರು ಸುತ್ತಮುತ್ತಲಿನ ಪ್ಯಾಕೇಜ್ ಕಾಮಗಾರಿಗಳ ಬಿಲ್ಲುಗಳನ್ನು ಪಾವತಿಸಲು ಬಳಕೆ ಮಾಡಿಕೊಳ್ಳಲಾಗಿರುತ್ತದೆ ಎಂದು ಕೆಆರ್‌ಡಿಸಿಎಲ್ ರವರು ತಿಳಿಸಿರುತ್ತಾರೆ.

ಅದರಂತೆ, ಕೆನರಾ ಬ್ಯಾಂಕಿನಿಂದ ಸೆಳೆದಿರುವ ಸಾಲಕ್ಕೆ ಕರಾರು ನಿಯಮಗಳಂತೆ ಕೆನರಾ ಬ್ಯಾಂಕ್, ಬೆಂಗಳೂರು ಇವರು ರೂ.9,67,89,786.00 ಗಳ ಡಿಮ್ಯಾಂಡ್ ಅನ್ನು ಕ್ರಮವಾಗಿ ಏಪ್ರಿಲ್-2023 ರ ಮಾಹೆಗೆ ರೂ.4,63,79,913/- ಗಳು ಹಾಗೂ ಮೇ-2023 ರ ಮಾಹೆಗೆ ರೂ.5,04,09,873/- ಗಳು ಪಾವತಿಸಲು ತಿಳಿಸಿದ್ದು, ಸದರಿ ರೂ.9,67,89,786.00 ಗಳನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮಕ್ಕೆ ಲೆಕ್ಕಶೀರ್ಷಿಕೆ: 3054-80-190-0-01- ಋಣಸೇವೆಗಳು-240-ಬಡ್ಡಿ ಸಾಲ ಮೇಲುಸ್ತುವಾರಿ ಅಡಿಯಲ್ಲಿ ಬಿಡುಗಡೆ ಮಾಡುವಂತೆ ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಡಿಸಿಎಲ್ ರವರು ಓದಲಾದ (5)ರ ಪತ್ರದಲ್ಲಿ ಕೋರಿದ್ದು, ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಈ ಕೆಳಕಂಡಂತೆ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಲೋಇ ಇ-228 ಇಎಪಿ 2023 ಬೆಂಗಳೂರು, ದಿನಾಂಕ: 10-07-2023**

ಬೆಂಗಳೂರು ಸುತ್ತಮುತ್ತಲಿನ 155 ಕಿಮೀ ಉದ್ದದ 4 ರಸ್ತೆಗಳ 10 ಪ್ಯಾಕೇಜ್‌ಗಳನ್ನು ಕೆಆರ್‌ಡಿಸಿಎಲ್ ವತಿಯಿಂದ ಇಪಿಸಿ ಮಾದರಿಯಲ್ಲಿ ರಸ್ತೆ ಅಭಿವೃದ್ಧಿಪಡಿಸಲು ಕೆನರಾ ಬ್ಯಾಂಕ್ ನಿಂದ ಪಡೆದಿರುವ ಅವಧಿ ಸಾಲಕ್ಕೆ ಅಸಲು ಸಾಲದ ಮೇಲಿನ ಬಡ್ಡಿಯನ್ನು ಏಪ್ರಿಲ್-2023 ರ ಮಾಹೆಗೆ ರೂ.4,63,79,913/- ಗಳು ಹಾಗೂ ಮೇ-2023 ರ ಮಾಹೆಗೆ ರೂ.5,04,09,873/- ಗಳು ಸೇರಿ ಒಟ್ಟು ರೂ.9,67,89,786.00 ಗಳನ್ನು (ಒಂಭತ್ತು ಕೋಟಿ ಅರವತ್ತೇಳು ಲಕ್ಷದ ಎಂಭತ್ತೊಂಭತ್ತು ಸಾವಿರದ ಏಳು ನೂರ ಎಂಭತ್ತಾರು ರೂಪಾಯಿಗಳು ಮಾತ್ರ) ಲೆಕ್ಕಶೀರ್ಷಿಕೆ : 3054-80-190-0-01-240- ಋಣಸೇವೆಗಳು- ಬಡ್ಡಿ ಸಾಲ ಮೇಲುಸ್ತುವಾರಿ ಅಡಿಯಲ್ಲಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತಕ್ಕೆ ಹಣ ಬಿಡುಗಡೆ ಮಾಡಲಾಗಿದೆ.

ಹೀಗೆ ಬಿಡುಗಡೆ ಮಾಡಲಾದ ಹಣವನ್ನು ಡ್ರಾ ಮಾಡಲು ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಡಿಸಿಎಲ್ ರವರು ಸಹಾಯಾನುದಾನ ಸ್ವೀಕರ್ತನ ರಸೀದಿ (Grant in Aid Payee receipt) ಬಿಲ್ಲನ್ನು ಆಂತರಿಕ ಆರ್ಥಿಕ ಸಲಹೆಗಾರರು, ಲೋಕೋಪಯೋಗಿ ಇಲಾಖೆ ಇವರಿಗೆ ಸಲ್ಲಿಸಿ ಮೇಲುರುಜು ಮಾಡಿಸಿ, ಈ ಸ್ವೀಕರ್ತ ರಸೀದಿಯನ್ನು ರಾಜ್ಯ ಹುಜೂರು ಖಜಾನೆ, ಬೆಂಗಳೂರು ಇಲ್ಲಿಗೆ ಸಲ್ಲಿಸಿ ಡ್ರಾ ಮಾಡತಕ್ಕದ್ದು.

ಈ ಹಣ ಬಿಡುಗಡೆ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 02 ಟಿಎಫ್‌ಪಿ 2023, ದಿನಾಂಕ 01-04-2023 ರಲ್ಲಿ ಸಹಮತಿಸಿರುವಂತೆ ಆಡಳಿತ ಇಲಾಖೆಯ ಕಾರ್ಯದರ್ಶಿ ರವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದ ಮೇರೆಗೆ ಹೊರಡಿಸಲಾಗಿದೆ.

**ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ**
**ಮತ್ತು ಅವರ ಹೆಸರಿನಲ್ಲಿ**

10/7/2023

**(ರಾಮಚಂದ್ರಪ್ಪ ಕೆ.ಎಸ್)**
ಸರ್ಕಾರದ ಅಧೀನ ಕಾರ್ಯದರ್ಶಿ,
ಬಾಹ್ಯ ಅನುದಾನಿತ ಯೋಜನೆಗಳು (ಇಎಪಿ)
ಲೋಕೋಪಯೋಗಿ ಇಲಾಖೆ

**ಪ್ರತಿಯನ್ನು :-**

1. ಮಹಾಲೇಖಪಾಲರು (ಅಕೌಂಟ್ಸ್) ಕರ್ನಾಟಕ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ವಿಕಾಸಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು
4. ಸರ್ಕಾರದ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ವಿಕಾಸಸೌಧ, ಬೆಂಗಳೂರು.
5. ಆಂತರಿಕ ಆರ್ಥಿಕ ಸಲಹೆಗಾರರು, ಲೋಕೋಪಯೋಗಿ ಇಲಾಖೆ, ವಿಕಾಸಸೌಧ, ಬೆಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.

7. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ, (ಲೋಕೋಪಯೋಗಿ ಆರ್ಥಿಕ ಕೋಶ), ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
8. ಜಂಟಿ ನಿರ್ದೇಶಕರು, ಸ್ಟೇಟ್ ಹುಜೂರ್ ಟ್ರೆಷರಿ, ಕೆ.ಆರ್.ಸರ್ಕಲ್, ಬೆಂಗಳೂರು.
9. ಜಂಟಿ ನಿರ್ದೇಶಕರು, ಟಿ.ಎನ್.ಎಮ್.ಸಿ ಖನಿಜ ಭವನ, ಬೆಂಗಳೂರು.
10. ಮುಖ್ಯ ಇಂಜಿನಿಯರ್, PRAMC, ಲೋಕೋಪಯೋಗಿ ಇಲಾಖೆ, ಕೆಆರ್ ವೃತ್ತ, ಬೆಂಗಳೂರು ರವರಿಗೆ ವೆಬ್ ಸೈಟ್ನಲ್ಲಿ ಪ್ರಕಟಿಸಲು.
11. ಹೆಚ್ಚುವರಿ ಪ್ರತಿಗಳು.